ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-1, July-August 2026, Pp. 103-108
©*IIMRD*, Mysuru

IIMRD JOURNALS

www.iimrd.com

# ಕೀರ್ತನೆಗಳಲ್ಲಿ ಸಾಮಾಜಿಕ ಬದುಕಿನ ಚಿತ್ರಣ

**ಡಾ. ಜಗನ್ನಾಥ ಸಾಯಿಬಣ್ಣ**

ಕನ್ನಡ ಅತಿಥಿ ಉಪನ್ಯಾಸಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

**ಸಾರಾಂಶ: (Abstract)**

*ಈ ಅಧ್ಯಯನವು ಕನ್ನಡ ಕೀರ್ತನೆಗಳಲ್ಲಿ ಪ್ರತಿಬಿಂಬಿತವಾಗಿರುವ ಸಾಮಾಜಿಕ ಬದುಕು, ಜನಜೀವನ ಮತ್ತು ಸಮಕಾಲೀನ ಸಾಮಾಜಿಕ ಮೌಲ್ಯಗಳನ್ನು ವಿಶ್ಲೇಷಿಸುತ್ತದೆ. ಕೀರ್ತನೆಗಳ ಮೂಲಕ ಅಂದಿನ ಸಮಾಜದ ಕುಟುಂಬ ವ್ಯವಸ್ಥೆ, ಜಾತಿ ವ್ಯವಸ್ಥೆ, ಧಾರ್ಮಿಕ ನಂಬಿಕೆಗಳು, ಆಚಾರ–ವಿಚಾರಗಳು ಹಾಗೂ ಸಾಮಾಜಿಕ ಸಂಬಂಧಗಳ ಚಿತ್ರಣವನ್ನು ಗುರುತಿಸಲಾಗಿದೆ. ಕೀರ್ತನಕಾರರು ತಮ್ಮ ಸಾಹಿತ್ಯದ ಮೂಲಕ ಸಮಾಜದಲ್ಲಿದ್ದ ಅಸಮಾನತೆ, ಮೂಢನಂಬಿಕೆ, ಶೋಷಣೆ ಮತ್ತು ಅನ್ಯಾಯಗಳನ್ನು ಪ್ರಶ್ನಿಸಿರುವುದನ್ನು ಅಧ್ಯಯನವು ಪರಿಶೀಲಿಸುತ್ತದೆ. ಸಮಾನತೆ, ಮಾನವೀಯತೆ, ಭಕ್ತಿ, ನೈತಿಕತೆ ಮತ್ತು ಸತ್ಚಾರಿತ್ರ್ಯಗಳಂತಹ ಮೌಲ್ಯಗಳು ಕೀರ್ತನೆಗಳಲ್ಲಿ ಹೇಗೆ ವ್ಯಕ್ತವಾಗಿವೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಸಾಮಾನ್ಯ ಜನರ ದಿನನಿತ್ಯದ ಬದುಕು, ವೃತ್ತಿ, ಆರ್ಥಿಕ ಸ್ಥಿತಿ ಹಾಗೂ ಸಾಮಾಜಿಕ ಆಚರಣೆಗಳ ಪ್ರತಿಬಿಂಬವು ಕೀರ್ತನೆಗಳನ್ನು ಪ್ರಮುಖ ಸಾಂಸ್ಕೃತಿಕ ಆಕರಗಳನ್ನಾಗಿ ಮಾಡಿದೆ. ಹೀಗಾಗಿ, ಕೀರ್ತನೆಗಳು ಕೇವಲ ಭಕ್ತಿ ಪ್ರಧಾನ ಸಾಹಿತ್ಯವಾಗಿರದೆ, ಸಮಾಜದ ಬದುಕು ಮತ್ತು ಸಾಮಾಜಿಕ ಪರಿವರ್ತನೆಯ ಆಶಯಗಳನ್ನು ದಾಖಲಿಸುವ ಮಹತ್ವದ ಸಾಹಿತ್ಯಿಕ ದಾಖಲೆಗಳಾಗಿವೆ ಎಂಬುದನ್ನು ಅಧ್ಯಯನವು ಪ್ರತಿಪಾದಿಸುತ್ತದೆ.*

**ಮುಖ್ಯಪದಗಳು (Keywords):** *ಕೀರ್ತನೆಗಳು, ಸಾಮಾಜಿಕ ಬದುಕು, ಜನಜೀವನ, ಸಾಮಾಜಿಕ ಮೌಲ್ಯಗಳು, ಕನ್ನಡ ಸಾಹಿತ್ಯ*

## ಪೀಠಿಕೆ

ಕನ್ನಡದ ಹರಿದಾಸ ಸಾಹಿತ್ಯವು ಕನ್ನಡ ಭಕ್ತಿ ಪರಂಪರೆಯ ಮಹತ್ವದ ಸಾಹಿತ್ಯಧಾರೆಯಾಗಿದೆ. ಹರಿದಾಸರು ಭಕ್ತಿ, ಜ್ಞಾನ, ವೈರಾಗ್ಯ ಮತ್ತು ಮೋಕ್ಷಮಾರ್ಗದಂತಹ ಆಧ್ಯಾತ್ಮಿಕ ವಿಚಾರಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವ ಸರಳ ಹಾಗೂ ಸುಲಭ ಭಾಷೆಯಲ್ಲಿ ಕೀರ್ತನೆಗಳ ಮೂಲಕ ಅಭಿವ್ಯಕ್ತಿಸಿದರು. ಆದರೆ ಅವರ ಕೀರ್ತನೆಗಳ ವ್ಯಾಪ್ತಿ ಕೇವಲ ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರಗಳಿಗೆ ಸೀಮಿತವಾಗಿಲ್ಲ. ಅವು ತಾವು ಬದುಕಿದ ಕಾಲದ ಸಾಮಾಜಿಕ ಜೀವನ, ಕುಟುಂಬ ಸಂಬಂಧಗಳು, ವಿವಾಹ ಪದ್ಧತಿ, ಮಹಿಳೆಯ ಸ್ಥಾನಮಾನ, ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ಮತ್ತು ಮಾನವೀಯ ಮೌಲ್ಯಗಳನ್ನೂ ಪ್ರತಿಬಿಂಬಿಸುತ್ತವೆ. ಈ ಕಾರಣದಿಂದ ಕೀರ್ತನೆ ಸಾಹಿತ್ಯವನ್ನು ಕೇವಲ ಭಕ್ತಿಗೀತೆಗಳ ಸಂಕಲನವೆಂದು

*Please cite this article as:* ಜಗನ್ನಾಥ ಸಾಯಿಬಣ್ಣ. (2026). ಕೀರ್ತನೆಗಳಲ್ಲಿ ಸಾಮಾಜಿಕ ಬದುಕಿನ ಚಿತ್ರಣೆ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(1). ಪು.ಸಂ.* 103–108

ಪರಿಗಣಿಸದೆ, ಅಂದಿನ ಸಮಾಜಜೀವನದ ಪ್ರಮುಖ ಸಾಹಿತ್ಯಿಕ ಆಕರವಾಗಿಯೂ ಅಧ್ಯಯನ ಮಾಡಬಹುದು.

**ವಿವಾಹ ವ್ಯವಸ್ಥೆಯ ಚಿತ್ರಣ**

ವಿವಾಹವು ಸಾಮಾಜಿಕ ವ್ಯವಸ್ಥೆಯ ಪ್ರಮುಖ ಅಂಗವಾಗಿದೆ. ಅದು ಸ್ತ್ರೀ–ಪುರುಷರ ವೈಯಕ್ತಿಕ ಸಂಬಂಧಕ್ಕೆ ಮಾತ್ರ ಸೀಮಿತವಾಗದೆ, ಕುಟುಂಬ ನಿರ್ಮಾಣ, ಬಂಧುತ್ವದ ವಿಸ್ತರಣೆ ಮತ್ತು ಸಾಮಾಜಿಕ ಸಂಬಂಧಗಳ ಸ್ಥಾಪನೆಗೆ ಕಾರಣವಾಗುವ ಸಾಂಸ್ಕೃತಿಕ ವ್ಯವಸ್ಥೆಯಾಗಿದೆ. ಹರಿದಾಸರ ಕೀರ್ತನೆಗಳಲ್ಲಿ ವಿವಾಹಕ್ಕೆ ಸಂಬಂಧಿಸಿದ ಹಲವು ಆಚರಣೆಗಳು ಮತ್ತು ಸಂಪ್ರದಾಯಗಳ ಉಲ್ಲೇಖಗಳು ಕಂಡುಬರುತ್ತವೆ. ಕನ್ಯಾದಾನ, ಹೋಮ, ಪಾಣಿಗ್ರಹಣ ಮೊದಲಾದ ವಿವಾಹ ವಿಧಿಗಳ ಜೊತೆಗೆ ಮಂಗಳಸೂತ್ರ ಅಥವಾ ತಾಳಿಗೂ ವಿಶೇಷ ಸ್ಥಾನವಿದ್ದುದನ್ನು ಕೀರ್ತನಾ ಸಾಹಿತ್ಯದಿಂದ ಗುರುತಿಸಬಹುದು. ಪುರಂದರದಾಸರ ಕೀರ್ತನೆಯೊಂದರಲ್ಲಿ ತಾಳಿ ಕಟ್ಟುವ ಆಚರಣೆಯ ಚಿತ್ರಣ ಹೀಗೆ ಬರುತ್ತದೆ:

***"ತಾಳಿಯ ಮೇಲೆ ನಿಂತನೆ ಕಲಕಿ***
***ಚಪ್ಪಾಳೆ ತಟ್ಟುವನೆ ಸೊಳಸಹಸ್ರ***
***ಗೋಪೇರ ಕೂಡಿದ ತಾಳಿಯ ಕಟ್ಟುವನೆ"***

ಈ ಸಾಲುಗಳಲ್ಲಿ ವಿವಾಹ ಸಂದರ್ಭದಲ್ಲಿ ತಾಳಿ ಕಟ್ಟುವ ಆಚರಣೆಯ ಉಲ್ಲೇಖವಿದೆ. ತಾಳಿಯು ವಿವಾಹಿತ ಸ್ತ್ರೀಯ ಮಂಗಳ ಚಿಹ್ನೆಯಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಹೊಂದಿದ್ದುದನ್ನು ಇದರಿಂದ ಗ್ರಹಿಸಬಹುದು. ಹೀಗಾಗಿ ಕೀರ್ತನೆಯ ಧಾರ್ಮಿಕ ನಿರೂಪಣೆಯೊಳಗೆ ಅಂದಿನ ಸಾಮಾಜಿಕ ಆಚರಣೆಯೊಂದು ಸಹಜವಾಗಿ ದಾಖಲಾಗಿರುವುದನ್ನು ಕಾಣಬಹುದು.

ವಿವಾಹ ಸಂದರ್ಭದಲ್ಲಿ ವಧು–ವರರನ್ನು ಹಸೆಗೆ ಕರೆಯುವುದು, ಹಾಡುಗಳನ್ನು ಹಾಡುವುದು, ಸಂಗೀತಕ್ಕೆ ಸ್ಥಾನ ನೀಡುವುದು ಮೊದಲಾದ ಆಚರಣೆಗಳೂ ಕೀರ್ತನೆಗಳಲ್ಲಿ ಪ್ರತಿಫಲಿಸುತ್ತವೆ. ಇದರಿಂದ ವಿವಾಹವು ಕೇವಲ ಧಾರ್ಮಿಕ ವಿಧಿವಿಧಾನವಲ್ಲದೆ, ಕುಟುಂಬ, ಬಂಧು–ಬಳಗ ಮತ್ತು ಸಮುದಾಯದ ಪಾಲ್ಗೊಳ್ಳುವಿಕೆಯ ಸಾಂಸ್ಕೃತಿಕ ಆಚರಣೆಯಾಗಿತ್ತು ಎಂಬುದು ತಿಳಿಯುತ್ತದೆ.

**ವಿವಾಹದಲ್ಲಿ ಮಹಿಳೆಯ ಸ್ಥಾನ**

ವಿವಾಹ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಗೆ ಇದ್ದ ಸ್ಥಾನಮಾನವೂ ಕೀರ್ತನೆಗಳಲ್ಲಿ ವ್ಯಕ್ತವಾಗಿದೆ. ಮುತ್ತೈದೆಯನ್ನು ಲಕ್ಷ್ಮಿಯ ಸ್ವರೂಪವಾಗಿ ಕಾಣುವ ಸಾಮಾಜಿಕ–ಸಾಂಸ್ಕೃತಿಕ ನಂಬಿಕೆ ಅಂದಿನ ಸಮಾಜದಲ್ಲಿ ಪ್ರಚಲಿತವಾಗಿತ್ತು. ಪುರಂದರದಾಸರ ಕೀರ್ತನೆಯಲ್ಲಿ ಲಕ್ಷ್ಮಿಯನ್ನು ಹಸೆಗೆ ಕರೆಯುವ ಚಿತ್ರಣ ಹೀಗೆ ಬರುತ್ತದೆ:

***"ಅಂಗಜಪಿತನ ಅರ್ಧಾಂಗಿ ನೀ ಏಳು***
***ಶೃಂಗಾರ ದಂತ ಶುಭಾಂಗಿ ನೀ ಏಳು***
***ಅಂಗಳೆಯರ ಹಸೆಗೆ ಕರೇವರು."***

ಈ ಸಾಲುಗಳಲ್ಲಿ ಮಂಗಳಕಾರ್ಯದಲ್ಲಿ ಮಹಿಳೆಯ ಉಪಸ್ಥಿತಿಗೆ ನೀಡಿದ್ದ ಮಹತ್ವ ವ್ಯಕ್ತವಾಗುತ್ತದೆ. ಶುಭಕಾರ್ಯಗಳಲ್ಲಿ ಮುತ್ತೈದೆಯರಿಗೆ ಕುಂಕುಮ, ವೀಳ್ಯ, ಅರಿಶಿನ ಮೊದಲಾದ ಮಂಗಳದ್ರವ್ಯಗಳನ್ನು ನೀಡುವ ಸಂಪ್ರದಾಯವೂ ಈ ಸಾಮಾಜಿಕ ಹಿನ್ನೆಲೆಯಲ್ಲಿ ಅರ್ಥವಾಗುತ್ತದೆ. ಹೀಗಾಗಿ ಕೀರ್ತನೆಗಳು ಮಹಿಳೆಯನ್ನು ಕೇವಲ ಕುಟುಂಬದ ಸದಸ್ಯೆಯಾಗಿ ಮಾತ್ರವಲ್ಲದೆ, ಮಂಗಳ ಮತ್ತು ಸಾಂಸ್ಕೃತಿಕ ಆಚರಣೆಗಳೊಂದಿಗೆ ಸಂಬಂಧಿಸಿದ ವ್ಯಕ್ತಿಯಾಗಿ ಚಿತ್ರಿಸುತ್ತವೆ.

**ಕುಟುಂಬ ವ್ಯವಸ್ಥೆಯ ಚಿತ್ರಣ**

ಕುಟುಂಬವು ಸಮಾಜದ ಮೂಲ ಘಟಕವಾಗಿದೆ. ಹರಿದಾಸರ ಕೀರ್ತನೆಗಳಲ್ಲಿ ಕುಟುಂಬ ಜೀವನದ ವಿವಿಧ ಮುಖಗಳು ಮತ್ತು ಕುಟುಂಬ ಸಂಬಂಧಗಳ ವೈವಿಧ್ಯಮಯ ಸ್ವರೂಪಗಳು ಕಾಣುತ್ತವೆ. ತಾಯಿ, ಅತ್ತೆ, ಹೆಂಡತಿ, ಮಗಳು, ಅತ್ತಿಗೆ, ನಾದಿನಿ ಮೊದಲಾದ ಸಂಬಂಧಗಳ ಉಲ್ಲೇಖದ ಮೂಲಕ ಅಂದಿನ ಕುಟುಂಬ ವ್ಯವಸ್ಥೆಯ ಸಂಕೀರ್ಣತೆಯನ್ನು ತಿಳಿಯಬಹುದು.

ಪುರಂದರದಾಸರ ಕೀರ್ತನೆಗಳಲ್ಲಿ ಮಹಿಳೆಯ ವಿವಿಧ ಪಾತ್ರಗಳ ಚಿತ್ರಣವಿದೆ. ಹೆಂಡತಿ, ತಾಯಿ, ಮಗಳು ಮೊದಲಾದ ಪಾತ್ರಗಳ ಮೂಲಕ ಕುಟುಂಬದಲ್ಲಿ ಮಹಿಳೆಯು ನಿರ್ವಹಿಸುತ್ತಿದ್ದ ಜವಾಬ್ದಾರಿಗಳನ್ನು ಗುರುತಿಸಬಹುದು. ಅವರ ಕೀರ್ತನೆಗಳಲ್ಲಿ ಮಹಿಳೆಯ ಕುರಿತು ಒಂದೇ ರೀತಿಯ ನಿಲುವು ಕಾಣುವುದಿಲ್ಲ. ಒಂದು ಕಡೆ ಸ್ತ್ರೀಯ ಸ್ವಾತಂತ್ರ್ಯಕ್ಕೆ ನಿರ್ಬಂಧದ ಧೋರಣೆ ಕಂಡುಬಂದರೆ, ಇನ್ನೊಂದೆಡೆ ಹೆಂಡತಿಯು ವ್ಯಕ್ತಿಯ ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ನೆರವಾಗಬಲ್ಲವಳಾಗಿಯೂ ಕಾಣಿಸುತ್ತಾಳೆ. ವಿಧವೆಯರ ಸಾಮಾಜಿಕ ಸ್ಥಿತಿಯ ಕುರಿತು ವ್ಯಕ್ತವಾಗುವ ಅನುಕಂಪವೂ ಗಮನಾರ್ಹವಾಗಿದೆ. ವಿಧವೆಯರ ಸ್ಥಿತಿಯನ್ನು ಸೂಚಿಸುವ ಕೀರ್ತನಾ ಸಾಲು – "ರಮಣನಿಲ್ಲದ ನಾರಿ ಪರರ ಕಣ್ಣಿಗೆ ಮಾರಿ..."

ಈ ಸಾಲು ಗಂಡನನ್ನು ಕಳೆದುಕೊಂಡ ಮಹಿಳೆಯ ಸಾಮಾಜಿಕ ಸ್ಥಿತಿಯತ್ತ ಗಮನ ಸೆಳೆಯುತ್ತದೆ. ಇಲ್ಲಿ ವೈಯಕ್ತಿಕ ದುಃಖದ ಜೊತೆಗೆ, ವಿಧವೆಯ ಕುರಿತು ಸಮಾಜ ಹೊಂದಿದ್ದ ದೃಷ್ಟಿಕೋನವೂ ಪ್ರತಿಫಲಿಸುತ್ತದೆ. ಹೀಗಾಗಿ ಕೀರ್ತನೆಗಳು ಮಹಿಳೆಯ ಬದುಕಿನ ಸಂಕಷ್ಟಗಳನ್ನು ದಾಖಲಿಸುವ ಸಾಮಾಜಿಕ ಸಂವೇದನೆಯ ಸಾಹಿತ್ಯವಾಗಿಯೂ ಕಾಣಿಸಿಕೊಳ್ಳುತ್ತವೆ.

**ಕುಟುಂಬ ಸಂಬಂಧಗಳಲ್ಲಿನ ಬದಲಾವಣೆ**

ಹರಿದಾಸರ ಕೀರ್ತನೆಗಳಲ್ಲಿ ಕುಟುಂಬ ಸಂಬಂಧಗಳ ಸ್ವರೂಪದಲ್ಲಾಗುತ್ತಿದ್ದ ಬದಲಾವಣೆಗಳನ್ನೂ ಗುರುತಿಸಬಹುದು. ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಪರಿವರ್ತನೆಯಾಗುತ್ತಿದ್ದ ಸಾಮಾಜಿಕ ಸ್ಥಿತಿ, ತಂದೆ–ಮಗ, ಅತ್ತೆ–ಸೊಸೆ, ಗಂಡ–ಹೆಂಡತಿ ಮೊದಲಾದ ಸಂಬಂಧಗಳ ಸ್ವರೂಪ ಮುಂತಾದವು ಕೀರ್ತನೆಗಳಲ್ಲಿ ವ್ಯಕ್ತವಾಗುತ್ತವೆ.

***ತಂದೆ–ಮಗನ ಸಂಬಂಧವನ್ನು ಸೂಚಿಸುವ ಸಾಲು:*** "ತಂದೆ ಮಾತನು ಕೇಳದ ತೊಂಡು ಮಗನಿದ್ದು ಫಲವೇನು" ಈ ಸಾಲು ಕುಟುಂಬದಲ್ಲಿ ಹಿರಿಯರ ಮಾತು, ಕಿರಿಯರ ಕರ್ತವ್ಯ ಮತ್ತು ಕುಟುಂಬ ಶಿಸ್ತಿಗೆ ಇದ್ದ ಮಹತ್ವವನ್ನು ಸೂಚಿಸುತ್ತದೆ. ಹೀಗಾಗಿ ಕೀರ್ತನೆಯ ಉದ್ದೇಶ ಕೇವಲ ಕುಟುಂಬ ಸಂಬಂಧವನ್ನು

ದಾಖಲಿಸುವುದಲ್ಲ; ಪರಸ್ಪರ ಗೌರವ, ಕರ್ತವ್ಯ ಮತ್ತು ನೈತಿಕ ಹೊಣೆಗಾರಿಕೆಯ ಆದರ್ಶವನ್ನೂ ಪ್ರತಿಪಾದಿಸುವುದಾಗಿದೆ.

**ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಪ್ರಶ್ನೆ**

ಹರಿದಾಸ ಸಾಹಿತ್ಯದ ಸಾಮಾಜಿಕ ಚಿಂತನೆಯ ಅತ್ಯಂತ ಮಹತ್ವದ ಅಂಶವೆಂದರೆ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಕುರಿತ ಪ್ರಶ್ನೆ. ಸಮಾಜದಲ್ಲಿ 'ಉಚ್ಚ' ಮತ್ತು 'ನೀಚ' ಎಂಬ ಭೇದಗಳನ್ನು ನಿರ್ಮಿಸಿ ಮನುಷ್ಯರನ್ನು ವಿಭಜಿಸುವ ಮನೋಭಾವವನ್ನು ದಾಸರು ತಮ್ಮ ಕೀರ್ತನೆಗಳ ಮೂಲಕ ಪ್ರಶ್ನಿಸಿದ್ದಾರೆ. ಪುರಂದರದಾಸರ ಕೀರ್ತನೆಯೊಂದರಲ್ಲಿ ಪ್ರಶ್ನಾತ್ಮಕವಾಗಿ ಹೀಗೆ ಹೇಳಲಾಗಿದೆ:

***"ಹೊಲೆಯ ಹೊರಗಿಹನೆ ಊರೊಳಗಿಲ್ಲವೇ?***
***ಹೊಲಗೇರಿಯೊಳ ಹೊಲೆಯ ಹೊಲತಿಲ್ಲವೇ?"***

ಈ ಪ್ರಶ್ನೆ ಕೇವಲ 'ಹೊಲೆಯ' ಎಂಬ ಜಾತಿಯ ಅಸ್ತಿತ್ವದ ಕುರಿತು ಕೇಳಿದ ಪ್ರಶ್ನೆಯಲ್ಲ. ಅದರ ಹಿಂದೆ ಮನುಷ್ಯನನ್ನು ಜಾತಿಯ ಆಧಾರದ ಮೇಲೆ ಗುರುತಿಸುವ ಸಾಮಾಜಿಕ ಮನೋಭಾವವನ್ನೇ ಪ್ರಶ್ನಿಸುವ ಆಶಯವಿದೆ. ಮುಂದೆ ಪುರಂದರದಾಸರು 'ಹೊಲೆಯ' ಎಂಬ ಪದಕ್ಕೆ ನೈತಿಕ ಅರ್ಥವನ್ನು ನೀಡುತ್ತಾರೆ:

***"ಶೀಲವನು ಕೈಕೊಂಡು ನಡೆಯದಾತನು ಹೊಲೆಯ***
***ಕೇಳಿ ಹರಿಶಾಸ್ತ್ರಗಳ ಹೇಳದವ ಹೊಲೆಯ***
***ದಾನ ಧರ್ಮವ ಮಾಡದವ ಹೊಲೆಯ***
***ಕದ್ದು ತನ್ನೊಡಲು ಪೊರೆಯುವವ ಹೊಲೆಯ..."***

ಈ ಸಾಲುಗಳ ಸಾಮಾಜಿಕ ಮಹತ್ವ ಅತ್ಯಂತ ಗಮನಾರ್ಹ. ಇಲ್ಲಿ ಹುಟ್ಟಿನ ಆಧಾರದ ಮೇಲೆ ವ್ಯಕ್ತಿಯನ್ನು ಶ್ರೇಷ್ಠ ಅಥವಾ ಕನಿಷ್ಠ ಎಂದು ನಿರ್ಧರಿಸುವ ಬದಲು, ಅವನ ಶೀಲ, ನಡತೆ, ಧಾರ್ಮಿಕ–ನೈತಿಕ ಪ್ರಜ್ಞೆ ಮತ್ತು ಸಾಮಾಜಿಕ ವರ್ತನೆಯ ಆಧಾರದ ಮೇಲೆ ಮೌಲ್ಯಮಾಪನ ಮಾಡಬೇಕು ಎಂಬ ಸಂದೇಶವಿದೆ.

ಅಂದರೆ, ಪುರಂದರದಾಸರ ಚಿಂತನೆಯಲ್ಲಿನ 'ಹೊಲೆಯ' ಎಂಬುದು ಕೇವಲ ಜಾತಿಯ ಗುರುತಾಗಿ ಉಳಿಯದೆ, ಕೆಟ್ಟ ನಡತೆಯ ನೈತಿಕ ರೂಪಕವಾಗಿ ಪರಿಣಮಿಸುತ್ತದೆ. ಇದು ಜಾತಿ ಆಧಾರಿತ ಶ್ರೇಷ್ಠತೆಯ ಕಲ್ಪನೆಯನ್ನು ಪ್ರಶ್ನಿಸುವ ಮಾನವೀಯ ನಿಲುವಾಗಿದೆ.

**ಕನಕದಾಸರ ಜಾತ್ಯತೀತ ಚಿಂತನೆ**

ಜಾತಿ ವ್ಯವಸ್ಥೆಯ ಕುರಿತ ಪ್ರಶ್ನೆ ಕನಕದಾಸರ ಕೀರ್ತನೆಗಳಲ್ಲಿಯೂ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ವ್ಯಕ್ತಿಯ ಮೌಲ್ಯವನ್ನು ಅವನ ಹುಟ್ಟಿನಿಂದ ನಿರ್ಧರಿಸದೆ, ಅವನ ಜ್ಞಾನ, ಸಂಸ್ಕಾರ ಮತ್ತು ಗುಣಗಳಿಂದ ನಿರ್ಧರಿಸಬೇಕು ಎಂಬ ಆಶಯ ಅವರ ಚಿಂತನೆಯಲ್ಲಿದೆ. ಅವರ ಆಶಯವನ್ನು ಸಾರುವ ಸಾಲು: **"**ಯಾವ ಕುಲವಾದರೇನು ಭಾವದ ವಿಜ್ಞಾನ ತಿಳಿದವನಿಗೆ**"** ಈ ಸಾಲಿನಲ್ಲಿ ಕುಲಕ್ಕಿಂತ ಜ್ಞಾನ, ಹುಟ್ಟಿಗಿಂತ ಗುಣ, ಜಾತಿಗಿಂತ ಮಾನವೀಯತೆ ಮುಖ್ಯ ಎಂಬ ಸಂದೇಶ ಸ್ಪಷ್ಟವಾಗುತ್ತದೆ. ಇದು ಕೇವಲ ಧಾರ್ಮಿಕ ಸಮಾನತೆಯ ವಿಚಾರವಲ್ಲ; ಸಾಮಾಜಿಕ ಸಮಾನತೆಯ ದೃಷ್ಟಿಯಿಂದಲೂ ಮಹತ್ವ ಪಡೆದ ಚಿಂತನೆಯಾಗಿದೆ.

ಅದೇ ರೀತಿಯಲ್ಲಿ 'ಕುಲ'ದ ಹೆಸರಿನಲ್ಲಿ ನಡೆಯುವ ಸಂಘರ್ಷವನ್ನು ಪ್ರಶ್ನಿಸುವ ಸಾಲುಗಳೂ ಉಲ್ಲೇಖಿಸಲ್ಪಟ್ಟಿವೆ:

***"ಕುಲಕುಲವೆಂದು ಹೊಡೆದಾಡದಿರಿ ನಿಮ್ಮ***
***ಕುಲದ ನೆಲೆಯೇನಾದರು ಬಲ್ಲಿರ"***

ಇಲ್ಲಿ ಕುಲದ ಹೆಸರಿನಲ್ಲಿ ನಡೆಯುವ ಅಹಂಕಾರ ಮತ್ತು ಸಂಘರ್ಷದ ನಿರರ್ಥಕತೆಯನ್ನು ಪ್ರಶ್ನಿಸಲಾಗಿದೆ. ಹೀಗಾಗಿ ಹರಿದಾಸ ಸಾಹಿತ್ಯದಲ್ಲಿ ಜಾತಿ–ಕುಲಕ್ಕಿಂತ ಮಾನವೀಯ ಗುಣಗಳಿಗೆ ಆದ್ಯತೆ ನೀಡುವ ಚಿಂತನೆ ಬೆಳೆಯುತ್ತದೆ. ಜಾತಿಗಿಂತ ಗುಣಕ್ಕೆ ಮಹತ್ವ ನೀಡಲಾಗಿದೆ. ಹರಿದಾಸರ ಸಾಮಾಜಿಕ ಚಿಂತನೆಯ ಪ್ರಮುಖ ಲಕ್ಷಣವೆಂದರೆ ಹುಟ್ಟಿನ ಬದಲು ಗುಣಕ್ಕೆ ನೀಡಿದ ಮಹತ್ವ. ಮನುಷ್ಯನ ಶ್ರೇಷ್ಠತೆಯನ್ನು ಅವನ ಜಾತಿ ನಿರ್ಧರಿಸುವುದಿಲ್ಲ; ಅವನ ನಡತೆ, ಶೀಲ, ಜ್ಞಾನ ಮತ್ತು ಮಾನವೀಯ ಗುಣಗಳು ನಿರ್ಧರಿಸುತ್ತವೆ.

ಪುರಂದರದಾಸರ 'ಹೊಲೆಯ' ಕೀರ್ತನೆಯು ಈ ವಿಚಾರವನ್ನು ಅತ್ಯಂತ ಪರಿಣಾಮಕಾರಿಯಾಗಿ ಪ್ರತಿಪಾದಿಸುತ್ತದೆ. ದಾನ–ಧರ್ಮ ಮಾಡದವನು, ಕಳ್ಳತನ ಮಾಡುವವನು, ಕೆಟ್ಟ ನಡತೆ ಹೊಂದಿರುವವನು ಮುಂತಾದವರನ್ನು 'ಹೊಲೆಯ' ಎಂದು ಗುರುತಿಸುವ ಮೂಲಕ ಅವರು ಜಾತಿಯ ಗುರುತನ್ನು ನೈತಿಕ ಮೌಲ್ಯದ ಪ್ರಶ್ನೆಯಾಗಿ ಪರಿವರ್ತಿಸುತ್ತಾರೆ.

ಇದರ ಮೂಲಕ ದಾಸರು ಎರಡು ಮುಖ್ಯ ವಿಚಾರಗಳನ್ನು ಪ್ರತಿಪಾದಿಸುತ್ತಾರೆ: ಮೊದಲನೆಯದು, ಜಾತಿಯ ಆಧಾರದ ಮೇಲೆ ವ್ಯಕ್ತಿಯ ಮೌಲ್ಯವನ್ನು ನಿರ್ಧರಿಸಬಾರದು; ಎರಡನೆಯದು, ವ್ಯಕ್ತಿಯ ನೈತಿಕ ನಡೆ–ನುಡಿಯೇ ಅವನ ನಿಜವಾದ ಮೌಲ್ಯವನ್ನು ನಿರ್ಧರಿಸುತ್ತದೆ.

**ಕೀರ್ತನೆಗಳಲ್ಲಿ ಮಾನವೀಯತೆ**

ಹರಿದಾಸರ ಸಾಮಾಜಿಕ ಚಿಂತನೆಯ ಕೇಂದ್ರಬಿಂದು ಮಾನವೀಯತೆ. ಅವರ ದೃಷ್ಟಿಯಲ್ಲಿ ಭಕ್ತಿ ಎಂದರೆ ಕೇವಲ ದೇವರ ಆರಾಧನೆಯಲ್ಲ; ಅದು ಉತ್ತಮ ನಡತೆ, ನೈತಿಕ ಬದುಕು ಮತ್ತು ಮಾನವೀಯ ಸಂಬಂಧಗಳ ಮಾರ್ಗವೂ ಹೌದು. ಆದ್ದರಿಂದ ಸಾಮಾಜಿಕ ಸಂಬಂಧಗಳು, ಕುಟುಂಬ, ಜಾತಿ ಮತ್ತು ನೈತಿಕತೆಗಳು ಅವರ ಆಧ್ಯಾತ್ಮಿಕ ಚಿಂತನೆಯೊಂದಿಗೆ ಬೆಸೆದುಕೊಂಡಿವೆ.

ಸಾಮಾಜಿಕ ಅನ್ಯಾಯ, ಅಸಮಾನತೆ ಮತ್ತು ಕೆಟ್ಟ ನಡವಳಿಕೆಯನ್ನು ಪ್ರಶ್ನಿಸುವ ಮೂಲಕ ದಾಸರು ಹೊರಗಿನ ಸಾಮಾಜಿಕ ವ್ಯವಸ್ಥೆಯ ಬದಲಾವಣೆಯ ಜೊತೆಗೆ ವ್ಯಕ್ತಿಯ ಅಂತರಂಗದ ಪರಿವರ್ತನೆಗೂ ಒತ್ತು ನೀಡಿದ್ದಾರೆ. ಹೀಗಾಗಿ ಅವರ ಕೀರ್ತನೆಗಳ ಸಾಮಾಜಿಕ ಚಿಂತನೆಯು ಕೇವಲ ಸಮಾಜವಿಮರ್ಶೆಯಲ್ಲ; ಅದು ನೈತಿಕ ಬದುಕಿನ ಬೋಧನೆಯೂ ಆಗಿದೆ.

**ಸಮಾರೋಪ**

ಒಟ್ಟಿನಲ್ಲಿ, ಕೀರ್ತನೆ ಸಾಹಿತ್ಯವು ಭಕ್ತಿ ಮತ್ತು ಆಧ್ಯಾತ್ಮಿಕತೆಯ ಸಾಹಿತ್ಯವಾಗಿರುವುದರ ಜೊತೆಗೆ ಸಾಮಾಜಿಕ ಬದುಕಿನ ಜೀವಂತ ದಾಖಲೆಯೂ ಆಗಿದೆ. ವಿವಾಹದ ವಿಧಿವಿಧಾನಗಳು, ತಾಳಿ ಕಟ್ಟುವ ಆಚರಣೆ, ಹಸೆಗೆ

ಕರೆಯುವ ಸಂಪ್ರದಾಯ, ಮುತ್ತೈದೆಯರ ಸ್ಥಾನ, ಕುಟುಂಬ ಸಂಬಂಧಗಳು, ಮಹಿಳೆಯ ಬದುಕು, ವಿಧವೆಯರ ಸ್ಥಿತಿ, ಕುಟುಂಬ ವ್ಯವಸ್ಥೆಯಲ್ಲಿನ ಬದಲಾವಣೆಗಳು ಹಾಗೂ ಜಾತಿ–ಅಸ್ಪೃಶ್ಯತೆಯಂತಹ ಸಾಮಾಜಿಕ ಸಂಗತಿಗಳು ಕೀರ್ತನೆಗಳಲ್ಲಿ ಪ್ರತಿಫಲಿಸಿವೆ.

ವಿಶೇಷವಾಗಿ ಪುರಂದರದಾಸರ "ಹೊಲೆಯ ಹೊರಗಿಹನೆ ಊರೊಳಗಿಲ್ಲವೇ?" ಎಂಬ ಪ್ರಶ್ನೆ ಮತ್ತು "ಶೀಲವನು ಕೈಕೊಂಡು ನಡೆಯದಾತನು ಹೊಲೆಯ" ಎಂಬ ನೈತಿಕ ವ್ಯಾಖ್ಯಾನವು ಜಾತಿ ವ್ಯವಸ್ಥೆಯ ವಿರುದ್ಧದ ಅವರ ಸಾಮಾಜಿಕ ದೃಷ್ಟಿಯನ್ನು ಸ್ಪಷ್ಟಪಡಿಸುತ್ತದೆ. ಅದೇ ರೀತಿ ಕನಕದಾಸರ "ಯಾವ ಕುಲವಾದರೇನು ಭಾವದ ವಿಜ್ಞಾನ ತಿಳಿದವನಿಗೆ" ಎಂಬ ಸಾಲು ಜಾತಿಗಿಂತ ಜ್ಞಾನ ಮತ್ತು ಮಾನವೀಯತೆಗೆ ಹೆಚ್ಚಿನ ಸ್ಥಾನ ನೀಡುತ್ತದೆ.

ಹೀಗಾಗಿ ಹರಿದಾಸರ ಕೀರ್ತನೆಗಳಲ್ಲಿ ಸಾಮಾಜಿಕ ವಾಸ್ತವದ ಚಿತ್ರಣ ಮತ್ತು ಸಾಮಾಜಿಕ ಮೌಲ್ಯಗಳ ಪ್ರತಿಪಾದನೆ ಎರಡೂ ಸಮನ್ವಯಗೊಂಡಿವೆ. ಅವು ಅಂದಿನ ಸಮಾಜವನ್ನು ಕೇವಲ ಪ್ರತಿಬಿಂಬಿಸುವುದಷ್ಟೇ ಅಲ್ಲದೆ, ಅದರಲ್ಲಿದ್ದ ಅನಿಷ್ಟಗಳನ್ನು ಪ್ರಶ್ನಿಸಿ ಸಮಾನತೆ, ನೈತಿಕತೆ, ಮಾನವೀಯತೆ ಮತ್ತು ಉತ್ತಮ ಬದುಕಿನ ಆಶಯವನ್ನು ಮುಂದಿಡುತ್ತವೆ. ಈ ದೃಷ್ಟಿಯಿಂದ ಕೀರ್ತನೆ ಸಾಹಿತ್ಯವು ಕನ್ನಡದ ಭಕ್ತಿ ಸಾಹಿತ್ಯದ ಜೊತೆಗೆ ಸಾಮಾಜಿಕ ಚಿಂತನೆಯ ಮಹತ್ವದ ಸಾಹಿತ್ಯ ಪರಂಪರೆಯಾಗಿಯೂ ಪರಿಗಣಿಸಬೇಕಾಗಿದೆ.

**ಪರಾಮರ್ಶನ ಗ್ರಂಥಗಳು**


- ಜಾಧವ, ಡಾ. ಸುರೇಶ್ ಎಲ್. (ಸಂ.), 2015. ಕೀರ್ತನ ಸಾಹಿತ್ಯ ಸಂಸ್ಕೃತಿ, ಸುಕೃತಿ ಪ್ರಕಾಶನ, 'ಶ್ರೀ ಕುಂಜ', ಜಯನಗರ, ಕಲಬುರಗಿ–585105.
- ನಾಗರತ್ನ, ಟಿ.ಎಸ್. (ಸಂ.) 1994. ಹರಿದಾಸ ಸಾಹಿತ್ಯ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
- ರಾಮಚಂದ್ರರಾವ್, ಎಸ್.ಕೆ. ಮತ್ತು ಇತರರು (ಸಂ.) 1999. ಶ್ರೀ ಪುರಂದರ ದಾಸರ ಸಾಹಿತ್ಯ ಮತ್ತು ವಿಮರ್ಶೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.